ಮಂಡಿಯಲ್ಲಿ ಮುಖ ಹುದುಗಿಸಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ ಹರಿಪ್ರಿಯಾಗೆ ತಮ್ಮದೇ ನಟನೆಯ 'ಸೂಜಿದಾರ' ಸಿನಿಮಾದ 'ಮರುಳಾದೆನು ಜೇನ ದನಿಗೆ' ಎಂಬ ಹಾಡು ಕಿವಿಗೆ ಬಿದ್ದಿದೆ. ಆಗ ಅಚ್ಚರಿಯಿಂದ ಎಲ್ಲರೂ ತಲೆಯೆತ್ತಿ ನೋಡಿದಾಗ ಗನ್ ಹಿಡಿದಿದ್ದ ಉಗ್ರನೊಬ್ಬ ತನ್ನ ಪ್ಯಾಂಟಿನ ಜೇಬಿನಿಂದ ಫೋನ್ ಎತ್ತಿಕೊಂಡು ಮಾತನಾಡುತ್ತಿರುವುದು ಕಾಣಿಸಿದೆ. ತಕ್ಷಣವೇ ಭರವಸೆಯ ಮಿಂಚೊಂದು ಹರಿದಂತಾಗಿ ಹರಿಪ್ರಿಯಾ 'ಅದು ನಂದೇ ಸಿನಿಮಾದ ಹಾಡು...' ಎಂದು ಕಿರುಚಿಕೊಂಡಿದ್ದಾರೆ. ಅವರು ಕನ್ನಡದಲ್ಲಿಯೇ ಕಿರುಚಿಕೊಂಡಿದ್ದರಿಂದ ಅವರಿಗೆ ಅರ್ಥವಾಗದಿದ್ದರೂ ಉಗ್ರ ಹತ್ತಿರ ಬಂದು ವಿಚಾರಿಸಿದ್ದಾನೆ. ತಮಗೆ ಗೊತ್ತಿರುವ ಹರುಕು ಮುರುಕು ಹಿಂದಿಯೆಲ್ಲಿಯೇ ವಿವರಿಸಿದಾಗ ಆ ಉಗ್ರನಿಗೆ ಸಿನಿಮಾ ನೋಡುವ ಹುಚ್ಚು ಇರುವುದು, ಟೆಲಿಗ್ರಾಮ್ ಆ್ಯಪ್‌ನಲ್ಲಿ 'ಸೂಜಿದಾರ' ಪೈರೇಟೆಡ್ ಸಿನಿಮಾವನ್ನು ನೋಡಿ ಹರಿಪ್ರಿಯಾ ಅವರ ಅಭಿಮಾನಿ ಆಗಿರುವುದು ಗೊತ್ತಾಗಿದೆ. ಆದರೂ ಸೂಜಿದಾರ ಸಿನಿಮಾದ ಡಿ–ಗ್ಲಾಮ್ ಲುಕ್‌ಗೂ ತನ್ನೆದುರಿನ ಮುಖಕ್ಕೂ ಹೋಲಿಕೆ ಗುರ್ತಿಸಲು ಸಾಧ್ಯವಾಗಿಲ್ಲ. ಹಾಗಾಗಿ ಹರಿಪ್ರಿಯಾ ಅವರ 'ನೀರ್‌ದೋಸೆ' ಸಿನಿಮಾದ ಹಾಡನ್ನು ಹಚ್ಚಿ ಅದಕ್ಕೆ ನರ್ತಿಸುವಂತೆ ಹೇಳಿದ್ದಾನೆ. ಹಾಡಿಗೆ ನರ್ತಿಸುವುದರ ಜತೆಗೆ ಸೃಜನ್ ಮತ್ತು ಹರಿಪ್ರಿಯಾ ಸೇರಿಕೊಂಡು ನೀರ್‌ದೋಸೆ ಸಿನಿಮಾದ ಒಂದು ಭಾವುಕ ಸನ್ನಿವೇಶವನ್ನು ಅಭಿನಯಿಸಿಯೂ ತೋರಿಸಿದ್ದಾರೆ. ಹರಿಪ್ರಿಯಾ ಅವರ ಮನೋಜ್ಞ ನಟನೆಗೆ ಮನಕರಗಿದ ಉಗ್ರರು ಬಂದೂಕನ್ನು ಹಿಮದಲ್ಲಿ ನೆಟ್ಟು, ಚಿತ್ರತಂಡದ ಮ್ಯಾಕಪ್ ಮ್ಯಾನ್‌ನಿಂದ ಕರ್ಚೀಫನ್ನು ಪಡೆದುಕೊಂಡು ಕಣ್ಣೀರು ಒರೆಸಿಕೊಂಡರು ಎನ್ನಲಾಗಿದೆ.

'ನೀರ್‌ದೋಸೆ ಸಿನಿಮಾದಲ್ಲಿ ಕಾಲ್‌ಗರ್ಲ್ ಗಂಗಾಪೂಜೆ ಮಾಡುವ ಸನ್ನಿವೇಶ ಇದ್ಯಲ್ಲ. ಆ ಸನ್ನಿವೇಶವನ್ನು ಅಭಿನಯಿಸಿ ತೋರಿಸಲು ನಾವು ತೀರ್ಮಾನಿಸಿದೆವು. ಜೀವಭಯ ಇಟ್ಟುಕೊಂಡು ನಟಿಸುವುದು ಹೇಗೆ? ಆದರೆ ನನ್ನ ಅಭಿನಯ ನಮ್ಮ ಇಡೀ ತಂಡದ ಪ್ರಾಣ ಉಳಿಸಬಲ್ಲದು ಎಂಬ ಯೋಚನೆಯೇ ನನಗೆ ಸ್ಫೂರ್ತಿಯಾಯಿತು. ಆ ದೃಶ್ಯವನ್ನೊಮ್ಮೆ ಮನಸಿನಲ್ಲಿ ರೀವೈಂಡ್ ಮಾಡಿಕೊಂಡೆ. ಅಭಿನಯಕ್ಕೆ ಇಳಿದ ಮೇಲೆ ನಾನು ಹಿಮಾಲಯದಲ್ಲಿದ್ದೇನೆ, ಸುತ್ತಲೂ ಟೆರರಿಸ್ಟ್‌ಗಳಿದ್ದಾರೆ, ಅವರು ಒಂದ್ಸಲ ಢಂ ಅನ್ಸಿದ್ರೆ ಹೇಳೋರು ಕೇಳೋರು ಇಲ್ಲದಂಗೆ ಸತ್ತೋಗ್ತೇನೆ ಎಂಬುದೆಲ್ಲ ಮನಸಿಂದ ಮರೆಯಾಗಿಬಿಡ್ತು. ನನ್ನ ಎದುರಿಗೆ ನಿರ್ದೇಶಕ ವಿಜಯಪ್ರಸಾದ್ ನಿಂತು ಆ್ಯಕ್ಷನ್ ಎಂದು ಹೇಳಿದಂತೆ ಕಲ್ಪಿಸಿಕೊಂಡೆ. ಆ ಕ್ಷಣ ಸುತ್ತಲಿನ ಜಗತ್ತೆಲ್ಲ ಮರೆಯಿತು. ನೀರ್ ದೋಸೆ ಕಾಲ್ ಗರ್ಲ್ ನನ್ನ ಮೈಯಲ್ಲಿ ಆವಾಹಿಸಿಕೊಂಡೆ. ಆ ಸನ್ನಿವೇಶ ನಟಿಸಿ ಮುಗಿಸಿದ ಮೇಲೆಯೇ ನಾನು ಮರಳಿ ವಾಸ್ತವಕ್ಕೆ ಬಂದಿದ್ದು. ನಟನೆಯ ಗುಂಗಿನಿಂದ ವಾಸ್ತವ ಜಗತ್ತಿಗೆ ಇಳಿದು ನೋಡಿದಾಗ ಸುತ್ತಲು ನಿಂತಿದ್ದ ಉಗ್ರರೆಲ್ಲ ಬಂದೂಕುಗಳನ್ನು ಹಿಮದ ಮೇಲೆ ಇಟ್ಟು ದಂಗಾಗಿ ನಿಂತಿದ್ದರು. ಎಲ್ಲರ ಕಣ್ಣುಗಳಲ್ಲಿಯೂ ನೀರು. ನನಗೆ ಒಂದು ಕ್ಷಣ ಏನಾಗುತ್ತಿದೆ ಅಂತ್ಲೇ ಗೊತ್ತಾಗ್ಲಿಲ್ಲ. ನೋಡ ನೋಡ್ತಿದ್ದ ಹಾಗೆಯೇ ಒಬ್ಬ ಮುಂದೆ ಬಂದು ನನ್ನ ಕೈಗಳನ್ನು ಹಿಡಿದುಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದ' ಎಂದು ಅಲ್ಲಿನ ಸನ್ನಿವೇಶವನ್ನು ಹರಿಪ್ರಿಯಾ ವಿವರವಾಗಿ ಹಂಚಿಕೊಂಡಿದ್ದಾರೆ.

ಹರಿಪ್ರಿಯಾ ಅಭಿನಯಕ್ಕೆ ಕರಗಿ ಹೋದ ಉಗ್ರರು ಮರುಕ್ಷಣವೇ ಸುರಕ್ಷಿತವಾಗಿ ಅವರನ್ನು ಶ್ರೀನಗರಕ್ಕೆ ತಲುಪಿಸುವ ಭರವಸೆ ನೀಡಿದ್ದಾರೆ. ಅಷ್ಟೇ ಅಲ್ಲ, ಅವರು ಅಭಿನಯಿಸಿದ ಎಲ್ಲ ಸಿನಿಮಾಗಳ ಡಿವಿಡಿಯನ್ನು ಕಳಿಸಿಕೊಡುವಂತೆಯೂ ಕೇಳಿದ್ದಾರೆ. ಹಾಗೆಯೇ 'ಸೂಜಿದಾರ' ಸಿನಿಮಾಕ್ಕೆ ಕಥೆಗಾರ ವಿಕ್ರಮ್ ಹತ್ವಾರ್ ಬರೆದಿರುವ ಹಾಡಿನ ಸಾಹಿತ್ಯವನ್ನು ಹಿಂದಿಯಲ್ಲಿ ಕೇಳಿ ಅರ್ಥೈಸಿಕೊಂಡು ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಹರಿಪ್ರಿಯಾ ಅವರನ್ನು ಪಾಕಿಸ್ತಾನದ ಸಿನಿಮಾಗಳಲ್ಲಿ ಬಂದು ನಟಿಸುವಂತೆಯೂ ಕೇಳಿಕೊಂಡಿದ್ದಾರಂತೆ.

ಅಲ್ಲಿಂದ ಶ್ರೀನಗರದವರೆಗೆ ಚಿತ್ರತಂಡವನ್ನು ತಂದು ಬೀಳ್ಕೊಂಡ ಉಗ್ರರ ತಂಡ ಹಿಂತಿರುಗಿ ಕಾಡಿನಲ್ಲಿ ಮರೆಯಾಗಿದೆ. ಇತ್ತ ಚಿತ್ರತಂಡ ಸಮಾಧಾನದ ನಿಟ್ಟುಸಿರು ಬಿಟ್ಟಿದೆ.

77ನೇ ಪುಟ ನೋಡಿ...



> ನಾನು ಚಿತ್ರೀಕರಣಕ್ಕೆ ಹೋದಾಗ ಉಗ್ರರು ದಾಳಿ ಮಾಡಿದ್ದರು ಎನ್ನುವುದು ಸತ್ಯವಲ್ಲ. ನಾನು ಚಿತ್ರೀಕರಣಕ್ಕೆ ಕಾಶ್ಮೀರಕ್ಕೆ ಹೋಗಿದ್ದು ನಿಜ. ಆದರೆ ಅಲ್ಲಿ ಏನಾಗಿದೆ ಎನ್ನುವ ಕುರಿತು ಏನೂ ಹೇಳುವ ಸ್ಥಿತಿಯಲ್ಲಿ ಇಲ್ಲ. ಯಾಕೆಂದರೆ ಅದು ಭದ್ರತೆಗೆ ಸಂಬಂಧಿಸಿದ ಸಂಗತಿ. ಈಗ ನಾನು ಸುರಕ್ಷಿತವಾಗಿದ್ದೇನೆ. ಸಿನಿಮಾಗಳ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದೇನೆ.
>
> –ಹರಿಪ್ರಿಯಾ

ಶ್ರೀನಗರದ ಡೋಂಗಿವಾಲ್‌ನಲ್ಲಿ ನಡೆದ ಚಿತ್ರೀಕರಣದಲ್ಲಿ ಹರಿಪ್ರಿಯಾ